# ಜೀವವೈವಿಧ್ಯ ವಾರ್ತಾಪತ್ರ

# BIODIVERSITY News Letter

## ಕರ್ನಾಟಕ ಜೀವವೈವಿಧ್ಯ ಮಂಡಳಿ

(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಕರ್ನಾಟಕ ಸರ್ಕಾರ)

ನೆಲಮಹಡಿ, ವನ ವಿಕಾಸ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003

ಸಂಪುಟ : 1 ಸಂಚಿಕೆ : 1 ISSN 0975 -1289 ಜನವರಿ – ಮಾರ್ಚ್ 2019


### ಅಧ್ಯಕ್ಷರ ನುಡಿ



ಪರಿಸರವು ಮಾನವನ ಉಳಿವು ಮತ್ತು ಆರ್ಥಿಕ ಚಟುವಟಿಕೆಯ ಮೇಲೆ ಪರಿಣಾಮ ಬೀರುವ, ಹಾಗೂ ಜೀವವಿರುವ ಎಲ್ಲಾ ಪ್ರಭೇದಗಳ, ಹವಾಮಾನ ಮತ್ತು ನೈಸರ್ಗಿಕ ಸಂಪನ್ಮೂಲಗಳ ಪರಸ್ಪರ ವಿನಿಮಯವನ್ನು ಒಳಗೊಂಡಿರುತ್ತದೆ. ಮುಂದಿನ ಪೀಳಿಗೆಗಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಯ ಮುಖಾಂತರ ನಮ್ಮ ಪರಿಸರವನ್ನು ಸುರಕ್ಷಿತವಾಗಿಡುವುದು ಅವಶ್ಯಕವಾಗಿರುತ್ತದೆ. 1992ರಲ್ಲಿ, ಸುಸ್ಥಿರ ಸಾಮಾಜಿಕ–ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಿ, ಸಾಂಸ್ಥಿಕ ಚೌಕಟ್ಟಿನ ಮೂಲಕ ಪರಿಸರದ ರಕ್ಷಣೆಯ ತುರ್ತು ಸಮಸ್ಯೆಗಳನ್ನು ಪರಿಹರಿಸಲು ಬ್ರೆಜಿಲ್‌ನ ರಿಯೋ–ಡಿ–ಜನೈರೋದಲ್ಲಿ ಮೊಟ್ಟಮೊದಲಿಗೆ, ಸಾಮಾನ್ಯವಾಗಿ ರಿಯೋ ಸಮ್ಮೇಳನ ಅಥವಾ ಭೂ ಶೃಂಗಸಭೆ ಎಂದು ಉಲ್ಲೇಖಿಸಲಾಗುವ, ಪರಿಸರ ಮತ್ತು ಅಭಿವೃದ್ಧಿಯ ಕುರಿತಾದ ವಿಶ್ವಸಂಸ್ಥೆ ಸಮ್ಮೇಳನವು (ಯುಎನ್‌ಸಿಇಡಿ) ನಡೆಯಿತು. ಇದು ಜೈವಿಕ ವೈವಿಧ್ಯ ಕುರಿತ ಅಂತರರಾಷ್ಟ್ರೀಯ ಒಡಂಬಡಿಕೆಯ ಉದಯಕ್ಕೆ ಕಾರಣವಾಯಿತು.

ಭಾರತ ಸರ್ಕಾರವು ಜೈವಿಕ ವೈವಿಧ್ಯ ಸಮಾವೇಶದ ಹೊಣೆಗಾರಿಕೆಗಳಾದ ಜೈವಿಕ ವೈವಿಧ್ಯ ಸಂರಕ್ಷಣೆ, ಸುಸ್ಥಿರ ಬಳಕೆ ಮತ್ತು ಬಳಕೆದಾರರ ಹಾಗೂ ಪೂರೈಕೆದಾರರ ನಡುವೆ ನ್ಯಾಯಸಮ್ಮತವಾಗಿ ಲಾಭ ಹಂಚಿಕೆಗಳನ್ನು ಪೂರೈಸಲು ಜೈವಿಕ ವೈವಿಧ್ಯ ಅಧಿನಿಯಮ, 2002ನ್ನು ಜಾರಿಗೆ ತಂದಿತು. ಜೀವವೈವಿಧ್ಯತೆಯಲ್ಲಿ ಶ್ರೀಮಂತ ದೇಶವಾದ ಭಾರತವು ಸಂಪನ್ಮೂಲಗಳನ್ನು ಬಳಸುವಾಗ ಅವುಗಳ ಸಂರಕ್ಷಣೆ, ಅಭಿವೃದ್ಧಿ ಮತ್ತು ಬಳಕೆಯ ಕುರಿತು ಕಾಳಜಿ ವಹಿಸಬೇಕು. ಅದರ ಜೊತೆಗೆ, ಜೈವಿಕ ಸಂಪನ್ಮೂಲಗಳ ಬಳಕೆಯ ಲಾಭ ಹಂಚಿಕೆಯೂ (Access and Benefit Sharing : ABS) ಕೂಡ ಮಹತ್ವದ್ದಾಗಿರುತ್ತದೆ.

ಜೈವಿಕ ವೈವಿಧ್ಯ ಅಧಿನಿಯಮ, 2002ನ್ನು ಅನುಷ್ಠಾನಗೊಳಿಸಲು ರಾಜ್ಯ ಜೀವವೈವಿಧ್ಯ ಮಂಡಳಿಯನ್ನು 2003ರಲ್ಲಿ ಸ್ಥಾಪಿಸಲಾಗಿದೆ. ಹಾಗೂ ಈ ಕಾಯಿದೆಯನ್ನು ಕಾರ್ಯರೂಪಕ್ಕೆ ತರಲು ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005ರ ಅಧಿಸೂಚನೆಯನ್ನು ಹೊರಡಿಸಲಾಗಿದೆ.

ಕರ್ನಾಟಕದಲ್ಲಿನ ಪರಿಸರ ವ್ಯವಸ್ಥೆಗಳನ್ನು ಹಾಗೂ ಸಂಪದ್ಭರಿತವಾದ ಜೀವವೈವಿಧ್ಯತೆಯನ್ನು ಉಳಿಸಲು ಹಲವಾರು ಯೋಜನೆಗಳನ್ನು ಹಾಗೂ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಮೌಲ್ಯಯುತ ಮಾಹಿತಿಯೊಂದಿಗೆ ಮಂಡಳಿಯ ಸಿಬ್ಬಂದಿಗಳ ಪರಿಶ್ರಮದ ಪರಿಣಾಮವಾಗಿ ಈ ವಾರ್ತಾಪತ್ರವು ಒಂದು ಸುಂದರರೂಪವನ್ನು ಪಡೆದುಕೊಂಡಿದೆ. ಈ ಉದಾತ್ತ ಪ್ರಯತ್ನದ ಭಾಗವಾಗಿರುವ ಪ್ರತಿಯೊಬ್ಬರಿಗೂ ನಾನು ಅಭಿನಂದಿಸುತ್ತೇನೆ ಮತ್ತು ಮಂಡಳಿಯ ಚಟುವಟಿಕೆಗಳಿಗೆ ನಾನು ಯಾವಾಗಲೂ ಯಶಸ್ಸನ್ನು ಕೋರುತ್ತೇನೆ.

**–ಎಸ್. ಪಿ. ಶೇಷಾದ್ರಿ**
ಅಧ್ಯಕ್ಷರು

### ಸದಸ್ಯ ಕಾರ್ಯದರ್ಶಿಯವರ ನುಡಿ



ಜೈವಿಕವೈವಿಧ್ಯ ಅಧಿನಿಯಮ 2002ನ್ನು ಭಾರತ ಸರ್ಕಾರವು ಜಾರಿಗೆ ತಂದಿದೆ. ಜೈವಿಕವೈವಿಧ್ಯತೆಯ ಸಮಾವೇಶ (ಸಿಬಿಡಿ) ದಡಿಯಲ್ಲಿ ಅಂಗೀಕರಿಸಲ್ಪಟ್ಟ ಒಪ್ಪಂದದ ಆಧಾರದ ಮೇಲೆ, ಮೂರು ಹಂತದ ರಚನೆಯೊಂದಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿಯಂತ್ರಕ, ಸಲಹೆ ಮತ್ತು ಸಹಕಾರ ನೀಡಲು ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರವನ್ನು ರಚಿಸಲಾಗಿದೆ. ರಾಜ್ಯ ಜೀವವೈವಿಧ್ಯ ಮಂಡಳಿಗಳು, ರಾಜ್ಯ ಮಟ್ಟದಲ್ಲಿ ಸುಸಂಘಟಿತ, ನಿಯಂತ್ರಕ ಮತ್ತು ಸಲಹಾ ಕಾರ್ಯಗಳು ಹಾಗೂ ಸ್ಥಳೀಯ ಮಟ್ಟಗಳಲ್ಲಿ ಚುನಾಯಿತಗೊಂಡ ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ಉದ್ದೇಶವಾದ ಸಂರಕ್ಷಣೆ, ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ ಹಾಗೂ ಜೀವವೈವಿಧ್ಯತೆಯ ದಾಖಲಾತಿ, ಜೀವವೈವಿಧ್ಯ ನಿರ್ವಹಣಾ ಸಮಿತಿಗಳು ಅವರ ವ್ಯಾಪ್ತಿಯಲ್ಲಿನ ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯ ಬಳಕೆಯ ಉದ್ದೇಶಕ್ಕಾಗಿ ಬಳಸುತ್ತಿರುವ ವ್ಯಕ್ತಿಗಳ ಮೇಲೆ ವಿಧಿಸಲಾಗುವ ಶುಲ್ಕವನ್ನು ಸಂಗ್ರಹಿಸುವ ಬಗ್ಗೆ ಪ್ರಚಾರಗೊಳಿಸುತ್ತವೆ.

ಈ ವಾರ್ತಾಸಂಚಿಕೆಯು ರಾಜ್ಯದಲ್ಲಿ ಅಧಿಸೂಚನೆಯನ್ನು ಜಾರಿಗೆ ತರಲು ಮಂಡಳಿಯ ಪ್ರಯತ್ನದ ಪ್ರಯಾಣದ ಮುಖ್ಯಾಂಶಗಳನ್ನು ಬಿಂಬಿಸುತ್ತದೆ ಮತ್ತು ಸಾಧನೆಗಳಿಗೆ ಕೊಡುಗೆ ನೀಡಿದ ಎಲ್ಲರಿಗೂ ಇದು ಗೌರವಯುತವಾಗಿದೆ. ಮಂಡಳಿಯು ತನ್ನ ಅಲ್ಪಾವಧಿಯಲ್ಲಿ ಬೃಹತ್ ಮೈಲಿಗಲ್ಲುಗಳನ್ನು ಸಾಧಿಸಿದೆ ಮತ್ತು ಇದು ಕರ್ನಾಟಕ ರಾಜ್ಯದಲ್ಲಿ ಮಾಡಲಾಗುತ್ತಿರುವ ಎಲ್ಲದರ ದಾಖಲೆಯಂತೆ ಕಾರ್ಯನಿರ್ವಹಿಸುತ್ತದೆ.

ಅನುಷ್ಠಾನದ ಕಾರ್ಯಚಟುವಟಿಕೆಗಳು ಕಷ್ಟಕರವಾಗಿದ್ದರೂ ಸಹ, ಕರ್ನಾಟಕ ಜೀವವೈವಿಧ್ಯ ಮಂಡಳಿಯು ಮಾಡಿದ ಸಾಧನೆಗಳು ಯಶಸ್ವಿ ಪ್ರಯತ್ನಕ್ಕೆ ಮತ್ತು ಪರಿಶ್ರಮಗಳಿಗೆ ಸಾಕ್ಷಿಗಳಾಗಿವೆ.

ಈ ವಾರ್ತಾಸಂಚಿಕೆಯ ಪ್ರಕಟಣೆಯನ್ನು ಹೊರತರುವಲ್ಲಿನ ಸಾಧನೆಯ ಪ್ರಯತ್ನಕ್ಕೆ, ಮಂಡಳಿಯ ಸಿಬ್ಬಂದಿಗಳ ಬದ್ಧತೆ ಹಾಗೂ ಉತ್ಸಾಹಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಕರ್ನಾಟಕ ಜೀವವೈವಿಧ್ಯ ಮಂಡಳಿಯ ವಾರ್ತಾಪತ್ರಿಕೆಯು ಮಂಡಳಿಯ ಕಾರ್ಯಚಟುವಟಿಕೆಗಳನ್ನು ದಾಖಲೆಯನ್ನಾಗಿ ಒದಗಿಸುತ್ತದೆ ಹಾಗೂ ಜೀವವೈವಿಧ್ಯತೆಯ ಸಂರಕ್ಷಣೆಗಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತದೆ.

**– ಡಾ.ವೀರೇಂದ್ರ ಸಿಂಗ್**
ಸದಸ್ಯ ಕಾರ್ಯದರ್ಶಿ

The theme of International Day for Biological Diversity (IDB) 2019 as adopted by the UN General Assembly, to be celebrated on May 22, 2019:
**"OUR BIODIVERSITY, OUR FOOD, OUR HEALTH"**

## ಸಂಪಾದಕೀಯ

ಜೀವವೈವಿಧ್ಯತೆಯಲ್ಲಿ ಸಸ್ಯಸಂಪತ್ತು, ಪ್ರಾಣಿ ಸಂಪತ್ತು, ಸೂಕ್ಷ್ಮಜೀವಿ ಸಂಪತ್ತು... ಹೀಗೆ ಅನೇಕ ಜೀವರಾಶಿಗಳ ಸಹಬಾಳ್ವೆ ಅಡಕವಾಗಿದೆ. ಜನಸಂಖ್ಯಾ ಸ್ಫೋಟ, ಸಂಪನ್ಮೂಲಗಳ ಅತಿಯಾದ ಬಳಕೆ, ಕೈಗಾರಿಕೀಕರಣ, ಜಾಗತಿಕ ತಾಪಮಾನದ ಏರಿಕೆ, ಅರಣ್ಯನಾಶ, ಅತಿವೃಷ್ಟಿ – ಅನಾವೃಷ್ಟಿ ಹಾಗೂ ಇನ್ನಿತರೆ ಪರಿಸರ ಸಂಬಂಧಿತ ವಸ್ತುಸ್ಥಿತಿಗಳಿಂದಾಗಿ ಜೀವವೈವಿಧ್ಯತೆಗೆ ಧಕ್ಕೆ ಒದಗಬಹುದಾಗಿದೆ. ಜೀವವೈವಿಧ್ಯತೆಯ ಸಂರಕ್ಷಣೆಯ ಮೂಲಕ ನಮ್ಮ ಸುತ್ತಣ ಪರಿಸರವನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಬೇಕು. ಆ ನಿಟ್ಟಿನಲ್ಲಿ, ಕರ್ನಾಟಕ ಜೀವವೈವಿಧ್ಯ ಮಂಡಳಿಯು ದೃಢವಾದ ಹೆಜ್ಜೆಗಳನ್ನಿಟ್ಟಿದೆ. 'ಜೀವವೈವಿಧ್ಯ ವಾರ್ತಾಪತ್ರ'ವು ಸಾರ್ವಜನಿಕರಲ್ಲಿ ಜೀವವೈವಿಧ್ಯತೆಯನ್ನು ಸಂರಕ್ಷಿಸುವಲ್ಲಿ ಅರಿವು ಮೂಡಿಸುತ್ತದೆ ಎಂಬ ನಂಬಿಕೆ ನಮ್ಮದು.

**ಪ್ರೊ. ಎಂ. ನಾರಾಯಣ ಸ್ವಾಮಿ**

ವಿಶ್ವಸಂಸ್ಥೆಯು ಸಾಮಾನ್ಯ ಸಭೆಯು ಗೊತ್ತುವಳಿಯಂತೆ ಮೇ 22, 2019 ರಂದು ಆಚರಿಸಲಾಗುವ ಅಂತರರಾಷ್ಟ್ರೀಯ ಜೀವವೈವಿಧ್ಯ ದಿನ 2019 ರ ಘೋಷವಾಕ್ಯ:

**"ನಮ್ಮ ಜೀವವೈವಿಧ್ಯತೆ, ನಮ್ಮ ಆಹಾರ, ನಮ್ಮ ಆರೋಗ್ಯ"**

**ಜನತಾ ಜೀವವೈವಿಧ್ಯ ದಾಖಲಾತಿ (ಪಿಬಿಆರ್) ಗಳ ತಯಾರಿಕೆಯ ಪ್ರಗತಿ**

ಪೂರ್ಣಗೊಂಡ ದಾಖಲಾತಿಗಳ ಸಂಖ್ಯೆ : 1958

ತಯಾರಿಕೆಯ ಹಂತದಲ್ಲಿರುವ ದಾಖಲಾತಿಗಳ ಸಂಖ್ಯೆ : 500

**ಜೀವವೈವಿಧ್ಯ ನಿರ್ವಹಣಾ ಸಮಿತಿಗಳ ರಚನೆಯ ಪ್ರಗತಿ**

ಗ್ರಾಮ ಪಂಚಾಯಿತಿ : 5358
ತಾಲ್ಲೂಕು ಪಂಚಾಯಿತಿ : 148
ಜಿಲ್ಲಾ ಪಂಚಾಯಿತಿ : 16
ಪುರಸಭೆ : 1

**ಕರ್ನಾಟಕದ ಜೀವವೈವಿಧ್ಯ ಪಾರಂಪರಿಕ ತಾಣಗಳು:**

1. ನಲ್ಲೂರು ಹುಣಸೆ ತೋಪು, ದೇವನಹಳ್ಳಿ ತಾಲ್ಲೂಕು,
2. ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಕೃಷಿವಿಶ್ವವಿದ್ಯಾಲಯ, ಬೆಂಗಳೂರು,
3. ಹೊಗರೆಖಾನ್ ಗಿರಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಮತ್ತು
4. ಅಂಬಾರಗುಡ್ಡ, ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

## Chairmen of KBB

| Sl. No. | Name | From | To |
|---|---|---|---|
| 1 | Sri. C. Chennigappa | 21.11.2003 | 02.11.2007 |
| 2 | Sri. Abhijith Dasgupta, IAS | 02.11.2007 | 24.12.2009 |
| 3 | Sri. Krishna Palemar | 24.12.2009 | 20.09.2012 |
| 4 | Sri. R.M.N. Sahai, IFS (Retd) | 21.01.2014 | 24.01.2017 |
| 5 | Sri. S.P. Sheshadri | 23.08.2017 | - |

## COMPOSITION OF KARNATAKA BIODIVERSITY BOARD

| Sl. No. | Board Members | Designation |
|---|---|---|
| 1 | Sri. S.P. Sheshadri, Chairman, Karnataka Biodiversity Board, Ground Floor, Vanavikas, $18^{th}$ Cross, Malleshwaram, Bengaluru – 560 003. | Chairman |
| 2 | Sri. Sandeep Dave, IAS, Additional Chief Secretary to Government, Forest, Ecology and Environment Department, MS Building, Bengaluru – 560 001. | Ex-officio Member |
| 3 | Sri. Vijay Kumar Gogi, IFS, Principal Secretary to Government, Forest, Ecology and Environment Department, MS Building, Bengaluru – 560 001. | Ex-officio Member |
| 4 | Sri. Rajender Kumar Kataria, IAS, Secretary to Government, Department of Agriculture, MS Building – 560 001. | Ex-officio Member |
| 5 | Sri. Punati Sridhar, IFS, Principal Chief Conservator of Forests (HoFF), Aranya Bhavan, $18^{th}$ Cross, Malleshwaram, Bengaluru – 560 003. | Ex-officio Member |
| 6 | Smt. Meenakshi Negi, IFS, Commissioner, Department of AYUSH, Dhanvantari Road, Ananda Rao Circle, Bengaluru – 560 009. | Ex-officio Member |
| **7** | Dr. C. G. Kushalappa, Dean Forestry, University of Agriculture and Horticultural Sciences (Shivamogga), College of Forestry (Ponnampet), Kunda Road, Ponnampet – 571 216. | Non-officio Member |
| 8 | Dr. M. Mahadeva Murthy, Professor, Dept. of Forestry and Environmental Science, UAS, GKVK, Bengaluru – 560 065. | Non-officio Member |
| 9 | Dr. Jayakara Bhandary M, Associate Professor, Dept. of Botany, Government First Grade College, Car Street, Mangaluru – 575 001. | Non-officio Member |
| 10 | Prof. M. Narayana Swamy, Professor & Head, Dept. of Veterinary Physiology, Veter inary College, Hebbal, Bengaluru – 560 024. | Non-officio Member |
| 11 | Dr. Niranjana Murthy, Professor & Scheme Head, AICRP on Potential Crops, RIOF Building, UAS, GKVK, Bangalore – 560 065. | Non-officio Member |
| 12 | Smt. Anita K. Arekal, IFS, Additional Principal Chief Conservator of Forests (Social Forestry), Aranya Bhavan, $18^{th}$ Cross, Malleshwaram, Bengaluru – 560 003. | Special Invitee |
| 13 | Sri. B.T. Khanapure, Drugs Controller, Drugs Control Department Palace Road, Bengaluru – 560 001. | Special Invitee |
| 14 | Dr. Virender Singh, IFS, Member Secretary, Karnataka Biodiversity Board, Ground Floor, Vanavikas, $18^{th}$ Cross, Malleshwaram, Bengaluru – 560 003. | Member Secretary - Convener |

## ನೂತನ ಸಚಿವರಾಗಿ ಸತೀಶ್ ಜಾರಕಿಹೊಳಿಯವರು



ಸನ್ಮಾನ್ಯರಾದ ಸತೀಶ್ ಜಾರಕಿಹೊಳಿಯವರು ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ಸಚಿವರಾಗಿ ದಿನಾಂಕ 22.12.2018 ರಂದು ಪ್ರಮಾಣ ವಚನ ಸ್ವೀಕರಿಸಿದರು. ಕರ್ನಾಟಕ ಜೀವವೈವಿಧ್ಯ ಮಂಡಳಿಯ ಚಟುವಟಿಕೆಗಳು ಸಚಿವರ ಅಭಯಹಸ್ತದ ನೆರವಿನಿಂದ ಇನ್ನಷ್ಟು ಪ್ರಗತಿದಾಯಕವಾಗಲಿ ಎಂಬ ಆಶಯ ನಮ್ಮೆಲ್ಲರದು. (ಚಿತ್ರ ಕೃಪೆ : ಅಂತರಜಾಲ)

## Member Secretaries of Karnataka Biodiversity Board

| Sl. No. | Name and Designation | From | To |
|---|---|---|---|
| 1 | Sri. Shivanna, IFS, CCF | 31.07.2003 | 20.06.2006 |
| 2 | Sri. N. D. Tiwari, IFS, CCF | 21.06.2006 | 07.03.2007 |
| 3 | Dr. R. C. Prajapathi, IFS, APCCF | 08.03.2007 | 30.09.2010 |
| 4 | Sri. K. S. Sugara, IFS, CCF | 23.10.2010 | 25.12.2011 |
| 5 | Sri. K. S. Sugara, IFS, APCCF | 26.12.2011 | 12.03.2013 |
| 6 | Sri. R. K. Singh, IFS, APCCF | 13.03.2013 | 18.07.2016 |
| 7 | Dr. Virender Singh, IFS, APCCF | 18.07.2016 | - |

## ಗುರಿಗೊಂದು ಗರಿ "ರಾಜ್ಯ ಜೀವವೈವಿಧ್ಯತೆ ಪ್ರಶಸ್ತಿ"

ಕರ್ನಾಟಕದಲ್ಲಿ ಜೀವವೈವಿಧ್ಯತೆಗೆ ಸಂಬಂಧಿಸಿದ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಸಾಧಕರನ್ನು ಗುರುತಿಸಿ, ಪ್ರಶಸ್ತಿ ಮತ್ತು ಸನ್ಮಾನಿಸುವ ಕಾರ್ಯವನ್ನು ಮಂಡಳಿಯು ಹಮ್ಮಿಕೊಂಡಿರುತ್ತದೆ.

ಕರ್ನಾಟಕ ಜೀವವೈವಿಧ್ಯ ಮಂಡಳಿಯು 2010-11 ನೇ ಸಾಲಿನಿಂದ ಜೀವವೈವಿಧ್ಯತೆಯ ಸಂರಕ್ಷಣೆ, ಅವುಗಳ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳು ಹಾಗೂ ಪಾರಂಪರಿಕ ಜ್ಞಾನದ ಬಳಕೆಯಿಂದ ದೊರೆಯುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಹಂಚಿಕೆಯಲ್ಲಿ ವಿಶಿಷ್ಟ ಸೇವೆ ಸಲ್ಲಿಸಿರುವ ಅರ್ಹ ವ್ಯಕ್ತಿ ಹಾಗೂ ಸಂಸ್ಥೆಗಳನ್ನು ಗುರುತಿಸಿ "ರಾಜ್ಯ ಜೀವವೈವಿಧ್ಯ ಪ್ರಶಸ್ತಿ"ಗಳನ್ನು ನೀಡಲು ಪ್ರಾರಂಭಿಸಿತು. ಪ್ರತಿ ವರ್ಷ 5 ವಿಭಾಗಗಳಲ್ಲಿ ಅಂದರೆ : 1. ಜೀವವೈವಿಧ್ಯತೆ - ಸಾಮಾನ್ಯ ವಿಭಾಗ, 2. ಕೃಷಿ ಜೀವವೈವಿಧ್ಯತೆ, 3. ಜೀವವೈವಿಧ್ಯತೆ ಮಹಿಳಾ ಪ್ರಶಸ್ತಿ, 4. ಅತ್ಯುತ್ತಮ ಜೀವವೈವಿಧ್ಯ ನಿರ್ವಹಣಾ ಸಮಿತಿ ಮತ್ತು 5. ಅತ್ಯುತ್ತಮ ಜೀವವೈವಿಧ್ಯ ಸಾಕ್ಷ್ಯ ಚಿತ್ರಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಿ, ಪ್ರತಿವಿಭಾಗದಲ್ಲಿ ಆಯ್ಕೆಗೊಂಡ ವ್ಯಕ್ತಿ ಅಥವಾ ಸಂಸ್ಥೆಗಳಿಗೆ ಮೇ 22 'ವಿಶ್ವ ಜೀವವೈವಿಧ್ಯ ದಿನ' ದಂದು ರೂ.25,000/- ಪ್ರೋತ್ಸಾಹ ಧನ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ಸನ್ಮಾನಿಸಿ ಗೌರವಿಸಲಾಗುತ್ತಿದೆ.

### 2018 ರಲ್ಲಿ ರಾಜ್ಯ ಜೀವವೈವಿಧ್ಯ ಪ್ರಶಸ್ತಿ ವಿಜೇತರು

| ಕ್ರ.ಸಂ. | ವಿಭಾಗ | ಅರ್ಜಿದಾರರ ಹೆಸರು |
|---|---|---|
| 1 | ಸಾಮಾನ್ಯ ಜೀವವೈವಿಧ್ಯತೆ | ಡಾ.ಸಯ್ಯದ್ ಅಬ್ರಾರ್ |
| 2 | ಕೃಷಿ ಜೀವವೈವಿಧ್ಯತೆ | ಶ್ರೀ.ರುದ್ರಪ್ಪ ಎಂ ಝುಲಪಿ |
| 3 | ಜೀವವೈವಿಧ್ಯತೆ ಮಹಿಳಾ ಪ್ರಶಸ್ತಿ | ಶ್ರೀಮತಿ ಲಕ್ಷ್ಮಿಬಾಯಿ ಎಂ. ಝುಲಪಿ |
| 4 | ಅತ್ಯುತ್ತಮ ಜೀವವೈವಿಧ್ಯ ನಿರ್ವಹಣಾ ಸಮಿತಿ | ಸಂಡೂರು ತಾಲ್ಲೂಕು. |
| 5 | ಅತ್ಯುತ್ತಮ ಜೀವವೈವಿಧ್ಯ ಸಾಕ್ಷ್ಯಚಿತ್ರ | ಯಾವುದೇ ಅರ್ಜಿ ಸ್ವೀಕೃತವಾಗಿರುವುದಿಲ್ಲ. |

## ಅಂತರರಾಷ್ಟ್ರೀಯ ಜೀವವೈವಿಧ್ಯ ದಿನ, ಮೇ 22.

ವಿಶ್ವ ಸಂಸ್ಥೆಯು ಪ್ರತಿ ವರ್ಷ ಮೇ 22 ಅನ್ನು "ಜೈವಿಕ ವೈವಿಧ್ಯದ ಅಂತರರಾಷ್ಟ್ರೀಯ ದಿನ" ಎಂದು ಘೋಷಿಸಿದೆ. ಈ ನಿಟ್ಟಿನಲ್ಲಿ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಸ್ಥಾಪನೆಗೊಂಡ 15 ವರ್ಷಗಳಿಂದ, ವಿವಿಧ ಜೀವವೈವಿಧ್ಯ ಕ್ಷೇತ್ರಗಳಡಿ ಆಯ್ದ ಶೀರ್ಷಿಕೆಗಳಡಿ ರಾಜ್ಯದಾದ್ಯಂತ ಶಾಲಾ ಕಾಲೇಜು ಮಕ್ಕಳಿಗೆ ಮತ್ತು ನಾಗರೀಕರಿಗೆ ಪ್ರಬಂಧ, ಚಿತ್ರಕಲೆ ಮತ್ತು ಛಾಯಾಚಿತ್ರ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ವಿಶ್ವ ಜೀವವೈವಿಧ್ಯ ದಿನವನ್ನು ಆಚರಿಸುತ್ತಿದೆ. ಆ ಮೂಲಕ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಜೀವವೈವಿಧ್ಯತೆಯ ಪ್ರಾಮುಖ್ಯತೆ, ಸಂರಕ್ಷಣೆ ಮತ್ತು ಪೋಷಣೆಯ ಮಹತ್ತರ ಜವಾಬ್ದಾರಿಯ ಬಗ್ಗೆ ಅರಿವು ಮೂಡಿಸುವ ಆಶಯ ಹೊಂದಿದೆ.

ಕಾರ್ಯಕ್ರಮದಲ್ಲಿ ಜೀವವೈವಿಧ್ಯತೆ ಕುರಿತು ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ, ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣೆ, ಹಾಗೂ ಜೀವವೈವಿಧ್ಯತೆಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿರುವ ಸಾಧಕರಿಗೆ "ರಾಜ್ಯ ಜೀವವೈವಿಧ್ಯ ಪ್ರಶಸ್ತಿ" ನೀಡುವುದರ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ.

ರಾಷ್ಟ್ರೀಯ ಜೀವವೈವಿಧ್ಯ ಪ್ರಾಧಿಕಾರ, ಚೆನ್ನೈರವರಿಂದ ವಿವಿಧ ಸ್ಪರ್ಧೆಗಳಿಗೆ ವಿಷಯ ಶೀರ್ಷಿಕೆ ಲಭ್ಯಗೊಂಡ ನಂತರ ಮುಂಬರುವ ವಿಶ್ವ ಜೀವವೈವಿಧ್ಯ ದಿನಾಚರಣೆ ಅಂಗವಾಗಿ ಸ್ಪರ್ಧಾ ಕಾರ್ಯಕ್ರಮದ ಪ್ರಕಟಣೆಯನ್ನು ಮಾಡಲಾಗುವುದು.






2018ರಲ್ಲಿ ಆಯೋಜಿಸಲಾಗಿದ್ದ ವಿಶ್ವ ಜೀವವೈವಿಧ್ಯ ದಿನಾಚರಣೆ ಕಾರ್ಯಕ್ರಮದ ಕೆಲವು ಚಿತ್ರಗಳು.

## 'ಕಜೀಮಂ'ಯ 2018-19 ಸಾಲಿನ ಪ್ರಮುಖ ಚಟುವಟಿಕೆಗಳು



ಕರ್ನಾಟಕ ಜೀವವೈವಿಧ್ಯ ಮಂಡಳಿಯು ಸ್ಥಾಪನೆಯಾಗಿ 15 ವರ್ಷಗಳು ತುಂಬಿದ ನೆನಪಿಗಾಗಿ ಹೊರತಂದ ಸ್ಮರಣಸಂಚಿಕೆಯನ್ನು ಡಿಸೆಂಬರ್ 4, 2018 ರಂದು ಬೆಂಗಳೂರಿನ ಮಲ್ಲೇಶ್ವರಂನಲ್ಲಿರುವ ಅರಣ್ಯಭವನದಲ್ಲಿ ಮಂಡಳಿಯ ಅಧ್ಯಕ್ಷರಾದ ಎಸ್. ಪಿ. ಶೇಷಾದ್ರಿ ಅವರು ಬಿಡುಗಡೆ ಮಾಡಿದರು.



ಭಾರತೀಯ ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯದಲ್ಲಿ ಕಾನೂನು ಸಲಹಾ ಗುಂಪಿನೊಂದಿಗೆ ಕಾನೂನಾತ್ಮಕ ವಿಷಯಗಳು, ಜೀವವೈವಿಧ್ಯ ಅಧಿನಿಯಮ 2002ರ ಅನುಷ್ಠಾನದ ಸವಾಲುಗಳ ಕುರಿತಂತೆ ಫೆಬ್ರವರಿ 13, 2019 ರ ಸಭೆಯಲ್ಲಿ ಚರ್ಚಿಸಲಾಯಿತು.



ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭಾಂಶದ ಹಂಚಿಕೆ ಸಮಿತಿಯು ಬಂಟ್ವಾಳ ತಾಲ್ಲೂಕು ಪಂಚಾಯಿತಿಯ ಜೀವವೈವಿಧ್ಯ ನಿರ್ವಹಣಾ ಸಮಿತಿಯೊಂದಿಗೆ ಬಂಟ್ವಾಳದಲ್ಲಿ ಫೆಬ್ರವರಿ 14, 2019ರಂದು ಚರ್ಚಿಸಿತು.



ಮಂಗಳೂರಿನ ಎಸ್‌ಡಿಎಮ್ ಕಾನೂನು ಕಾಲೇಜಿನಲ್ಲಿ ಜೀವವೈವಿಧ್ಯ ಅಧಿನಿಯಮ 2002, ಜೈವಿಕ ಸಂಪನ್ಮೂಲಗಳ ಬಳಕೆ ಮತ್ತು ಲಾಭಾಂಶದ ಹಂಚಿಕೆ ಮತ್ತು ಕೆಲ ನಿರ್ದಿಷ್ಟವಾದ ಬಳಕೆ ಮತ್ತು ಲಾಭಾಂಶದ ಹಂಚಿಕೆ ಪ್ರಕರಣಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಫೆಬ್ರವರಿ 15 ಮತ್ತು 16, 2019 ರಂದು ಹಮ್ಮಿಕೊಳ್ಳಲಾಗಿತ್ತು.

## ಜೈವಿಕ ವೈವಿಧ್ಯ ಅಧಿನಿಯಮ, 2002ರ ಅನುಷ್ಠಾನ ಮತ್ತು ಅದರ ಬಳಕೆ ಮತ್ತು ಲಾಭ ಹಂಚಿಕೆಯ ನಿಯಮಗಳು

**ಜೈವಿಕವೈವಿಧ್ಯ ಒಡಂಬಡಿಕೆ**

ಪ್ರಪಂಚದಾದ್ಯಂತ ಜೈವಿಕ ಸಂಪನ್ಮೂಲಗಳ ನಿರಂತರ ಶೋಷಣೆಯು ಮಾನವನ ಸ್ವಾಸ್ಥ್ಯ ಮತ್ತು ಹಣಕಾಸಿನ ಮೇಲೆ ಪರಿಣಾಮವನ್ನು ಬೀರತೊಡಗಿತು. ಇದರಿಂದ ಎಚ್ಚೆತ್ತ ಅಂತರರಾಷ್ಟ್ರೀಯ ನಾಯಕರು ಜೈವಿಕ ಸಂಪನ್ಮೂಲಗಳ ಶೋಷಣೆಯ ವಿರುದ್ಧ ಹೋರಾಡಲು ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳಲು ಚಿಂತನೆ ನಡೆಸಿದರು. ಇದರ ಪರಿಣಾಮವಾಗಿ ರಿಯೋ ಡಿ ಜೆನೈರೋ ದಲ್ಲಿ 1992ರಲ್ಲಿ ನಡೆದ "ಭೂಸಮ್ಮೇಳನ ಶೃಂಗಸಭೆಯಲ್ಲಿ" ಜೀವವೈವಿಧ್ಯ ಒಡಂಬಡಿಕೆಯು ಜಾರಿಯಾಯಿತು. ಈ ಒಪ್ಪಂದಕ್ಕೆ ಭಾರತವು 1994ರಲ್ಲಿ ಸಹಿ ಹಾಕಿತು ಹಾಗೂ ಪ್ರಸ್ತುತ 196 ದೇಶಗಳು ಈ ಒಡಂಬಡಿಕೆಯ ಭಾಗವಾಗಿವೆ.

ಅಂತರರಾಷ್ಟ್ರೀಯ ಜೈವಿಕವೈವಿಧ್ಯತೆ ಒಡಂಬಡಿಕೆಯು ಮೂರು ಪ್ರಮುಖ ಗುರಿಗಳನ್ನು ಹೊಂದಿದೆ. ಅವೆಂದರೆ:

ಅ. ಜೀವವೈವಿಧ್ಯತೆಯ ಸಂರಕ್ಷಣೆ.
ಆ. ಜೈವಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ.
ಇ. ಜ್ಞಾನದ ಬಳಕೆಯಿಂದ ದೊರೆಯುವ ಲಾಭಗಳ ನಿಷ್ಪಕ್ಷಪಾತ ಮತ್ತು ನ್ಯಾಯ ಸಮ್ಮತ ಹಂಚಿಕೆ.

ಅಂತರರಾಷ್ಟ್ರೀಯ ಜೈವಿಕ ವೈವಿಧ್ಯತೆ ಒಡಂಬಡಿಕೆಯ ಭಾಗೀದಾರ ದೇಶಗಳು ತಮ್ಮ ಜೈವಿಕ ಸಂಪನ್ಮೂಲಗಳ ಮೇಲೆ ಸಾರ್ವಭೌಮ ಹಕ್ಕುಗಳನ್ನು ಹೊಂದಿರುತ್ತವೆ.

**ಜೈವಿಕವೈವಿಧ್ಯ ಅಧಿನಿಯಮ 2002**

ಭಾರತವು ಅಂತರರಾಷ್ಟ್ರೀಯ ಜೈವಿಕವೈವಿಧ್ಯತೆ ಒಡಂಬಡಿಕೆಯನ್ನು ಅನುಸರಿಸುವ ಬಾಧ್ಯತೆ ಮತ್ತು ಉದ್ದೇಶದಿಂದ ಜೈವಿಕವೈವಿಧ್ಯ ಅಧಿನಿಯಮ 2002ನ್ನು ದಿನಾಂಕ 5ನೇ ಫೆಬ್ರವರಿ 2003ರಿಂದ ಸಂಸತ್ತಿನ ಮುಖಾಂತರ ಜಾರಿಗೆ ಬಂದಿತು. ಈ ಕಾಯಿದೆಯನ್ನು ಜಾರಿಗೊಳಿಸುವ ಹೊಣೆ "ಜೈವಿಕ ವೈವಿಧ್ಯತೆಯ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ, ಜೈವಿಕ ಸಂಪನ್ಮೂಲಗಳ ವಾಣಿಜ್ಯ ಬಳಕೆ ಮತ್ತು ಇದಕ್ಕೆ ಹೊಂದಿಕೊಂಡ ಸಾಂಪ್ರದಾಯಿಕ ಜ್ಞಾನದ ಬಳಕೆಯಿಂದ ಉಂಟಾಗುವ ಲಾಭದ ನ್ಯಾಯಸಮ್ಮತವಾದ ಹಂಚಿಕೆ"ಯಾಗಿರುತ್ತದೆ.

**ಕರ್ನಾಟಕ ಜೀವವೈವಿಧ್ಯ ಮಂಡಳಿ**

ಕರ್ನಾಟಕ ಜೀವವೈವಿಧ್ಯ ಮಂಡಳಿಯು, ಜೈವಿಕವೈವಿಧ್ಯ ಅಧಿನಿಯಮ 2002ರ ಪರಿಚ್ಛೇದ 22ರನ್ವಯ ಸ್ಥಾಪನೆಗೊಂಡು, 1ನೇ ಆಗಸ್ಟ್ 2003ರಿಂದ ಕಾರ್ಯಾರಂಭ ಮಾಡಿತು. ಜೈವಿಕವೈವಿಧ್ಯ ಅಧಿನಿಯಮ 2002ರ ಪರಿಚ್ಛೇದ 63ರಡಿಯಲ್ಲಿ ನೀಡಲಾದ ಅಧಿಕಾರಗಳನ್ವಯ ಕರ್ನಾಟಕ ಸರ್ಕಾರವು ಕರ್ನಾಟಕ ಜೈವಿಕವೈವಿಧ್ಯ ನಿಯಮ 2005ನ್ನು ಜಾರಿಗೆ ತಂದಿತು.

**ಕರ್ನಾಟಕ ಜೀವವೈವಿಧ್ಯ ಮಂಡಳಿಯ ಕಾರ್ಯಚಟುವಟಿಕೆಗಳು**

ಜೈವಿಕವೈವಿಧ್ಯ ಅಧಿನಿಯಮ 2002ರ ಸೆಕ್ಷನ್ 23ರಂತೆ ರಾಜ್ಯ ಜೀವವೈವಿಧ್ಯ ಮಂಡಳಿಯು ಈ ಕೆಳಕಂಡಂತೆ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಬೇಕಾಗಿರುತ್ತದೆ.

1. ಜೈವಿಕವೈವಿಧ್ಯ ಸಂರಕ್ಷಣೆ, ಅದರ ಘಟಕಗಳ ಸುಸ್ಥಿರ ಬಳಕೆ ಮತ್ತು ಜೈವಿಕ ಸಂಪನ್ಮೂಲಗಳ ಬಳಕೆಯಿಂದ ಬರುವ ಲಾಭಗಳ ನ್ಯಾಯ ಸಮ್ಮತ ಹಂಚಿಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರವು ಹೊರಡಿಸಿದ ಯಾವುದೇ ಮಾರ್ಗದರ್ಶನ ಸೂತ್ರಗಳಿಗೆ ಒಳಪಟ್ಟು, ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.
2. ಯಾವುದೇ ಜೈವಿಕ ಸಂಪನ್ಮೂಲಗಳ ವಾಣಿಜ್ಯ ಬಳಕೆ, ಜೈವಿಕ ಸಮೀಕ್ಷೆ ಮತ್ತು ಜೈವಿಕ ಬಳಕೆಗಾಗಿ ಭಾರತೀಯರಿಗೆ ಅನುಮೋದನೆಗಳನ್ನು ನೀಡುವುದು.
3. ಈ ಅಧಿನಿಯಮದ ಇತರೆ ಉಪಬಂಧಗಳ ಅಗತ್ಯ ಪಾಲನೆ ಹಾಗೂ ರಾಜ್ಯ ಸರ್ಕಾರವು ಸೂಚಿಸುವ ಇತರ ಸಂಬಂಧಿತ ಕಾರ್ಯಗಳನ್ನು ನಿರ್ವಹಿಸುವುದು.

### ಸಾಲು ಮರದ ತಿಮ್ಮಕ್ಕನವರಿಗೆ ಪದ್ಮಶ್ರೀ ಪ್ರಶಸ್ತಿ



ರಾಮನಗರ ಜಿಲ್ಲೆಯ ಮಾಗಡಿ ತಾಲ್ಲೂಕಿನ ಹುಲಿಕಲ್‌ನಿಂದ ಕುದೂರಿನವರೆಗೆ ನಾಲ್ಕು ಕಿಲೋಮೀಟರುಗಳ ದೂರ ರಸ್ತೆ ಬದಿಯಲ್ಲಿ ಆಲದ ಮರದ ಸಸಿಗಳನ್ನು ನೆಟ್ಟು ತನ್ನ ಮಕ್ಕಳಂತೆ ಪೋಷಿಸಿ ಹೆಮ್ಮರಗಳನ್ನಾಗಿ, ಪರಿಸರ ಸಂರಕ್ಷಣೆಗೆ ತನ್ನ ಜೀವನವನ್ನೇ ಮುಡಿಪಾಗಿಟ್ಟ ಶತಾಯುಷಿ ಸಾಲು ಮರದ ತಿಮ್ಮಕ್ಕನವರಿಗೆ 2019 ನೇ ಸಾಲಿನಲ್ಲಿ ಭಾರತ ಸರ್ಕಾರದ ಪ್ರತಿಷ್ಠಿತ ನಾಗರಿಕ ಪ್ರಶಸ್ತಿಯಾದ ಪದ್ಮಶ್ರೀ ಪ್ರಶಸ್ತಿ ಸಂದಿದೆ. 'ನಾಡಿನ ಸಿರಿದೇವಿಯಾದ ಬಡವಿ' ಸಾಲುಮರದ ತಿಮ್ಮಕ್ಕನವರಿಗೆ ಕರ್ನಾಟಕ ಜೀವವೈವಿಧ್ಯ ಮಂಡಳಿಯು ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ. (ಚಿತ್ರ ಕೃಪೆ : ಅಂತರಜಾಲ)

**Notification of the list of endangered species under section 38 of the Biological Diversity Act, 2002**

In exercise of the powers conferred by section 38 of the Biological Diversity Act, 2002, the Central Government, in consultation with the Government of Karnataka, has notified the species of plants and animals which are on the verge of extinction for the State of Karnataka vide Gazette notification S.O. 2718(E) dtd. 30th October 2010, New Delhi. The collection of the species listed below is prohibited, except with the approval of the Karnataka Biodiversity Board.

| Sl.No. | Name of the Plants |
|---|---|
| 1 | *Barleria grandiflora Dalzell* |
| 2 | *Beaumontia jerdoniana Wight* |
| 3 | *Ceropegia decaisneana Wight* |
| 4 | *Cinnamomum goaense Kosterm* |
| 5 | *Holigarna beddomei Hook. f.* |
| 6 | *Impatiens mysorensis Roth* |
| 7 | *Impatiens raziana Bhask.* |
| 8 | *Justicia nilgherrensis (Nees) C. B. Clarke* |
| 9 | *Madhuca insignis (Radlk.) H. J. Lam* |
| 10 | *Phyllanthus talbotii Sedgw* |
| 11 | *Salacia malabarica Gamble* |
| 12 | *Toxocarpus concanensis Hook. f.* |
| 13 | *Toxocarpus palghatensis Gamble* |
| 14 | *Vanda thwaitesii Hook.f.* |
| 15 | *Vanda wightii Rehb.f.* |
| 16 | *Hopea canarensis Hole* |

| Sl.No. | Name of the Animals |
|---|---|
| 1 | *Latidens salimalli, Thonglongya 1974* |
| 2 | *Otomops wroughtoni (Thomas, 1913)* |
| 3 | *Viverra civettina, Blyth, 1862* |
| 4 | *Balaenoptera musculus (Linnaeus, 1758)* |
| 5 | *Dugong dugon (Muller, 1776)* |
| 6 | *Panthera tigris tigris, Linnaeus, 1758* |
| 7 | *Gyps bengalensis (Gmelin, 1788)* |
| 8 | *Gyps indicus (Scopoli, 1786)* |
| 9 | *Dermochelys coriacea (Vandelli, 1761)* |
| 10 | *Eretmochelya imbricate (Linnaeus, 1766)* |
| 11 | *Fejervarya murthii, Pillai, 1979* |
| 12 | *Indirana gundia (Dubois, 1986)* |
| 13 | *Indirana phrynoderma (Boulenger, 1882)* |
| 14 | *Micrixalus kotiigeharensis (Rao, 1937)* |
| 15 | *Malabar Large Spotted Civet* |
| 16 | *Lion Tailed Macaque* |

**Fixing of ABS percentage for commercial utilization of medicinal plants:**

The Ministry of Environment, Forests and Climate Change (MoEFCC) and the National Biodiversity Authority (NBA) issued regulations on 21st November, 2014 called "Guidelines on Access to Biological Resources and Associated Knowledge and Benefits Sharing Regulations, 2014". These guidelines provide for certain percentages of benefit sharing due from different categories of users of biological resources. The Board in its 30th meeting constituted an Expert Committee to look into the categorization of the commercially utilized medicinal plants for ABS percentages. The report of the Expert Committee on Medicinal Plants was adopted during the 34th Board meeting held in April 2017 and the same was notified in the Official Gazette of Karnataka on 15th March, 2018. The Gazette notification and further details can be accessed from

https://www.karnataka.gov.in/kbb/english/BDACT/ABS%20Percentages-Med%20plants-Karnataka%20Gazette%20notification-2018.pdf

**ABS Dispersal to Biodiversity rich Taluks**

To facilitate strengthening of few Biodiversity Management Committees in the State, the Board with the support of the Karnataka Forest Department identified four biodiversity rich taluks, i.e., Periyapatna, Chincholi, Bantwal and Sagara, for the disbursal of a portion of the ABS amount accrued in the Board. Interactive workshops were also held for strengthening the capacities of the BMCs in understanding the roles and responsibilities and to facilitate the preparation of the Management Plans for each of the 4 Taluks and the work is currently in progress.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಗೊತ್ತುವಳಿಯಂತೆ ಮೇ 22, 2019 ರಂದು ಆಚರಿಸಲಾಗುವ ಅಂತರರಾಷ್ಟ್ರೀಯ ಜೀವವೈವಿಧ್ಯ ದಿನ 2019 ರ ಘೋಷವಾಕ್ಯ:

**ನಮ್ಮ ಜೀವವೈವಿಧ್ಯತೆ**

**ನಮ್ಮ ಆಹಾರ**

**ನಮ್ಮ ಆರೋಗ್ಯ**

**ಕರ್ನಾಟಕ ಜೀವವೈವಿಧ್ಯ ನಿಯಮಗಳು 2005 ಕ್ಕೆ ದಿನಾಂಕ 23.01.2019 ರಂದು ತಿದ್ದುಪಡಿ ಮಾಡಲಾಗಿದ್ದು, ಅದರಂತೆ, ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಜೀವವೈವಿಧ್ಯ ನಿರ್ವಹಣಾ ಸಮಿತಿಯ ಅಧ್ಯಕ್ಷರು ಸಹ ಆಗಿರುತ್ತಾರೆ. ಸರ್ಕಾರದ ಅಧಿಸೂಚನೆಯನ್ನು ಇಲ್ಲಿ ಮರುಪ್ರಕಟಿಸಲಾಗಿದೆ.**

ಕರ್ನಾಟಕ ಸರ್ಕಾರ

**ಸಂಖ್ಯೆ:** ಅಪಜೀ 115 ಇಎನ್‌ವಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:23.01.2019.

## ಅಧಿಸೂಚನೆ

ಜೈವಿಕ ವೈವಿಧ್ಯ ಅಧಿನಿಯಮ, 2002 ರ (2003 ರ 18 ನೇ ಕೇಂದ್ರೀಯ ಶಾಸನ) ಸೆಕ್ಷನ್ 63 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಕರ್ನಾಟಕ ಜೈವಿಕವೈವಿಧ್ಯ ನಿಯಮಗಳು 2005 ಕ್ಕೆ ತಿದ್ದುಪಡಿ ತರಲು ಈ ಕೆಳಕಂಡ ನಿಯಮಗಳನ್ನು ರಚಿಸಿದೆ, ಅವುಗಳೆಂದರೆ.

## ನಿಯಮಗಳು

**1. ಹೆಸರು ಮತ್ತು ಪ್ರಾರಂಭ:** (1) ಈ ನಿಯಮಗಳನ್ನು ಕರ್ನಾಟಕ ಜೈವಿಕ ವೈವಿಧ್ಯ (ತಿದ್ದುಪಡಿ) ನಿಯಮಗಳು, 2019 ಎಂದು ಕರೆಯತಕ್ಕದ್ದು.

(2) ಈ ನಿಯಮಗಳು ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

**2. ನಿಯಮ 21 ಕ್ಕೆ ತಿದ್ದುಪಡಿ** : ಕರ್ನಾಟಕ ಜೈವಿಕ ವೈವಿಧ್ಯ ನಿಯಮಗಳು, 2005 ರ ನಿಯಮ 21ರ ಉಪ ನಿಯಮ (3) ಹಾಗೂ (4) ರ ಬದಲಾಗಿ ಈ ಕೆಳಗಿನಂತೆ ಪ್ರತಿಸ್ಥಾಪಿಸತಕ್ಕದ್ದು, ಅಂದರೆ:-

"(3) ಸ್ಥಳೀಯ ಸಂಸ್ಥೆಯ ಅಧ್ಯಕ್ಷರು ಜೀವವೈವಿಧ್ಯ ನಿರ್ವಹಣಾ ಸಮಿತಿಯ ಅಧ್ಯಕ್ಷರು ಸಹ ಆಗಿರುತ್ತಾರೆ.

(4) ಜೀವವೈವಿಧ್ಯ ನಿರ್ವಹಣಾ ಸಮಿತಿಯ ಅಧ್ಯಕ್ಷರ ಪದಾವಧಿಯು ಸ್ಥಳೀಯ ಸಂಸ್ಥೆಯ ಅಧ್ಯಕ್ಷರ ಪದಾವಧಿಯವರೆಗೆ ಇರತಕ್ಕದ್ದು".

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎನ್.ಎಲ್.ಶಾಂತಕುಮಾರ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
(ಜೀವಿಪರಿಸ್ಥಿತಿ ಮತ್ತು ಪರಿಸರ)
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ಗೆ :

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ, 250 ಪ್ರತಿಗಳನ್ನು ಸರ್ಕಾರದ ಕಾರ್ಯದರ್ಶಿ (ಜೀವಿಪರಿಸ್ಥಿತಿ ಮತ್ತು ಪರಿಸರ), ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ಇವರಿಗೆ ಕಳುಹಿಸಲು ಕೋರಿದೆ.

# UNIQUE PROJECT TO SURVEY THE POPULATION STATUS OF MEDICINAL PLANT SPECIES IN THE FORESTS OF KARNATAKA

The Karnataka Biodiversity Board has taken up a challenging project to assess the population of medicinal plants which is first of its kind in India. It is the project entitled “ASSESSMENT OF POPULATION STATUS AND REMOVAL OF BIO- RESOURCES IN FORESTS WITH SPECIAL EMPHASIS ON MEDICINAL PLANTS IN KARNATAKA” sponsored by National Medicinal Plants Board, New Delhi in collaboration with Karnataka Forest Department and Karnataka Medicinal Plants Authority. The project was sanctioned on March 2015 for a period of one year, further it was extended till March 2020.




*Field training demonstration programme conducted during 2018-19*

## ಅಪ್ಪೆಮಿಡಿ : ಸಂಶೋಧನಾ ಪುಸ್ತಕ ಪ್ರಕಟಣೆ

'ಅಪ್ಪೆಮಿಡಿ – ಪರಿಮಳಯುಕ್ತ ರುಚಿಕರವಾದ ಉಪ್ಪಿನಕಾಯಿಯ ಕರ್ನಾಟಕದ ಮಾವಿನ ಮಿಡಿ' ಎಂಬ ಸಂಶೋಧನಾ ವರದಿಯನ್ನು ಪುಸ್ತಕವನ್ನಾಗಿ ಭಾಕೃಅಪ– ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆ, ಹೆಸರಘಟ್ಟ, ಬೆಂಗಳೂರು ಅವರು ಪ್ರಕಟಿಸಿದ್ದಾರೆ. ಪಶ್ಚಿಮ ಘಟ್ಟಗಳಲ್ಲಿ ಈ ಸಂಶೋಧನೆಯನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಯ 6 ಲಕ್ಷ ರೂಪಾಯಿಗಳ ಅನುದಾನದಲ್ಲಿ ಕೈಗೊಳ್ಳಲಾಗಿತ್ತು. ಯೋಜನೆಯ ಪ್ರಧಾನ ಸಂಶೋಧಕರು ಡಾ. ಕೆ. ವಿ. ರವಿಶಂಕರ್. ಅಪ್ಪೆಮಿಡಿಯ 49 ತಳಿಗಳ ಗುಣವಿಶ್ಲೇಷಣೆ ಮಾಡಲಾಗಿದೆ.

ಯೋಜನೆಯ ಆವಿಷ್ಕಾರಗಳನ್ನು ಬಣ್ಣಬಣ್ಣದ ಆಕರ್ಷಕ ಚಿತ್ರಗಳೊಂದಿಗೆ 148 ಪುಟಗಳ ಪುಸ್ತಕವನ್ನಾಗಿಸಲಾಗಿದೆ. ಪ್ರಕಟಣೆಯ ವೆಚ್ಚವನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಯ ಅನುದಾನದಲ್ಲಿ ಭರಿಸಲಾಗಿದೆ. ಇದೊಂದು ಸಂಗ್ರಹಯೋಗ್ಯ ಕೃತಿ.






**ನಲ್ಲೂರು ಹುಣಸೆತೋಪು, ದೇವನಹಳ್ಳಿ ತಾಲ್ಲೂಕು**

ಇದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ, ದೇವನಹಳ್ಳಿ ತಾಲ್ಲೂಕಿನಲ್ಲಿದೆ. ಸರ್ಕಾರದ ರಾಜ್ಯಪತ್ರ ಸಂಖ್ಯೆ: FEE 154 ENV 2006, ಬೆಂಗಳೂರು, ದಿನಾಂಕ: 24.01.2007ರ ಮೂಲಕ ಪಾರಂಪರಿಕ ತಾಣವಾಗಿ ಘೋಷಣೆಯಾಗಿದೆ. ಅದರ ವಿಸ್ತೀರ್ಣ 53.2 ಎಕರೆ. ಚೋಳ ರಾಜರ ಕಾಲದಲ್ಲಿ ಹುಣಸೆತೋಪು ನಿರ್ಮಾಣವಾಗಿದೆಯೆಂಬ ಇತಿಹಾಸವಿದೆ. ಅಲ್ಲಿ ಸುಮಾರು 300 ದೈತ್ಯಾಕಾರದ ಹುಣಸೇ ಮರಗಳಿವೆ. ಅವು ಸುಮಾರು 410 ವರ್ಷಗಳ ವಯಸ್ಸಿನವು. ಆ ಪ್ರದೇಶವನ್ನು ಕರ್ನಾಟಕ ಜೀವವೈವಿಧ್ಯ ಮಂಡಳಿಯ ವತಿಯಿಂದ ಸಂರಕ್ಷಿಸಲಾಗಿದೆ.

Printed Matter Book Post

To,

If undelivered please return to :

**KARNATAKA BIODIVERSITY BOARD**
Ground Floor, “Vana Vikas”, 18th Cross,
Malleshwaram, Bengaluru - 560 003

*Biodiversity News Letter Publication Committee*
Chief Patrons : S. P. Sheshadri, Chairman, Dr. Virender Singh, APCCF & Member Secretary
Editor : Prof. M. Narayana Swamy, Member, KBB
Editorial Board: N. Shantha Kumar, DCF, Dr. B. V. Purushotham, DD (AYUSH), Sahana S. Hegde, DD (Hort.), Dakshayanamma, G., ACF, Veena, P. G., Consultant - ABS, Ishwarya, B. N., Consultant - PBR, Pritham, S., R. A. (Zoology), Shruthi, S., T.E. (Taxonomy), Prasanna. K. R., T. E. (Botany)
With Printing Assistance by Puttaraju, S. P. (EA) and staff, KBB.

*Printed by **'Sadguru Screens'***